## ದಿನಾಂಕ:31-08-2023 ರಂದು ನಡೆದ ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದ 61ನೇ ತಾಂತ್ರಿಕ ಸಮಿತಿ ಸಭೆಯ ನಡವಳಿಗಳು

ಮುಖ್ಯ ಮೌಲ್ಯಮಾಪನಾಧಿಕಾರಿಗಳು, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ ಹಾಗೂ ತಾಂತ್ರಿಕ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಇವರು ಸಭೆಯ ಅಧ್ಯಕ್ಷರು, ತಾಂತ್ರಿಕ ಸಮಿತಿಯ ಸದಸ್ಯರು, ಪ್ರಾಧಿಕಾರದ ಅಧಿಕಾರಿಗಳು, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಮತ್ತು ಸಮಾಲೋಚಕ ಸಂಸ್ಥೆಯ ಪ್ರತಿನಿಧಿಗಳನ್ನು ಸ್ವಾಗತಿಸಿದರು.

*(ಭಾಗವಹಿಸಿದವರ ಪಟ್ಟಿಯನ್ನು ಲಗತ್ತಿಸಲಾಗಿದೆ)*

ಕಾರ್ಯಸೂಚಿಯಂತೆ ಕರಡು ಮೌಲ್ಯಮಾಪನ ವರದಿಗಳ ಮುಖ್ಯಾಂಶಗಳನ್ನು ಸಮಾಲೋಚಕ ಸಂಸ್ಥೆಗಳಿಂದ ಪ್ರಸ್ತುತ ಪಡಿಸಲಾಯಿತು ಮತ್ತು ಕರಡು ಉಲ್ಲೇಖದ ನಿಯಮಗಳನ್ನು ಪ್ರಸ್ತುತ ಪಡಿಸಲಾಯಿತು. ವಿವರವಾದ ಚರ್ಚೆಯ ನಂತರ ಅಧ್ಯಯನವಾರು ಸಲಹೆ/ಸೂಚನೆಗಳನ್ನು ಈ ಕೆಳಗಿನಂತೆ ನೀಡಲಾಗಿದೆ.

| ಕರಡು ಮೌಲ್ಯಮಾಪನ ವರದಿಗಳು | | |
|---|---|---|
| 1 | Impact evaluation of works carried out by Kalyana Karnataka Region Development Board (KKRDB) in 2021-22<br><br>**ಯೋಜನೆಯ ಅನುಷ್ಠಾನ ಇಲಾಖೆ:**<br>ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ<br><br>**ಸಮಾಲೋಚಕ ಸಂಸ್ಥೆ: CSD** | ಸಮಾಲೋಚಕ ಸಂಸ್ಥೆಯಿಂದ ಪರಿಷ್ಕೃತ ಕರಡು ಮೌಲ್ಯಮಾಪನ ವರದಿಯನ್ನು ಪ್ರಸ್ತುತ ಪಡಿಸಲಾಗಿ, ಈ ಕೆಳಕಂಡ ಸಲಹೆಗಳನ್ನು ನೀಡಲಾಯಿತು.<br>ಸಮಾಲೋಚಕ ಸಂಸ್ಥೆಯ ಪ್ರತಿನಿಧಿ, ಕೆ.ಕೆ.ಆರ್.ಡಿ.ಬಿ.ಯ ಕೆಲವು ಕಾಮಗಾರಿಗಳಲ್ಲಿ ಎರಿ ಮಣ್ಣಿನ ಗುಣವನ್ನು ಪರಿಗಣಿಸಿ ಅದಕ್ಕೆ ತಕ್ಕಂತೆ ಅಂದಾಜು ಪತ್ರಿಕೆ ತಯಾರು ಮಾಡದೇ ಕೆಲಸ ನಿರ್ವಹಿಸಿದ್ದನ್ನು ಸಮಿತಿಯ ಗಮನಕ್ಕೆ ತಂದರು.<br>1. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಮಾದರಿ ಕಾಮಗಾರಿಗಳ ಗಾತ್ರವು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೈಗೊಂಡಿರುವ ಒಟ್ಟು ಕಾಮಗಾರಿಗಳಿಗೆ ಹೋಲಿಸಿದರೆ ಬಹಳ ಕಡಿಮೆ ಇರುವುದರಿಂದ, ಸದರಿ ಅಧ್ಯಯನವನ್ನು ಮಾದರಿ (Sample Study) ಎಂದು ಪರಿಗಣಿಸಿ, ಸಂಬಂಧಪಟ್ಟ ದಾಖಲೆಗಳನ್ನು ಆಧರಿಸಿ ಎಲ್ಲಾ ಕಾಮಗಾರಿಗಳನ್ನು ತಪಾಸಣೆಗೆ ಒಳಪಡಿಸಬೇಕು ಎಂಬ ಶಿಫಾರಸ್ಸನ್ನು ಅಧ್ಯಯನದಲ್ಲಿ ಸೇರಿಸುವಂತೆ ಸಮಿತಿಯ ಅಧ್ಯಕ್ಷರು ಸೂಚಿಸಿದರು.<br>2. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೈಗೊಂಡಿರುವ/ಕೈಗೊಳ್ಳುವ ಎಲ್ಲಾ ಕಾಮಗಾರಿಗಳನ್ನು Project |

| | | |
|---|---|---|
| | | Portfolio Management System Software ಅಡಿಯಲ್ಲಿ ಅಳವಡಿಸಲು ಮತ್ತು ಎಲ್ಲಾ ಕಾಮಗಾರಿಗಳ ಅಂದಾಜು ವೆಚ್ಚ, ಟೆಂಡರ್ ಮೊತ್ತ ಇತ್ಯಾದಿ ವಿವರಗಳನ್ನು Work Soft Software ನಲ್ಲಿ ಅಳವಡಿಸಲು ಶಿಫಾರಸ್ಸು ಮಾಡುವಂತೆ ಸಮಿತಿಯ ಅಧ್ಯಕ್ಷರು ಸೂಚಿಸಿದರು.<br>3. ವರದಿಯ ಕರಡು ಪ್ರತಿಯನ್ನು ಸಲಹೆ/ಸೂಚನೆಗಳಿಗಾಗಿ ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ನಿರ್ದೇಶಕರು, ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ, ಯೋಜನಾ ಇಲಾಖೆ ಇವರಿಗೆ ಕಳುಹಿಸುವಂತೆ ಸಮಿತಿಯ ಅಧ್ಯಕ್ಷರು ಸೂಚಿಸಿದಾಗ, ಈಗಾಗಲೇ ಪ್ರಾಧಿಕಾರದಿಂದ ಸಲ್ಲಿಸಿರುವುದಾಗಿ ಸಭೆಯ ಗಮನಕ್ಕೆ ತರಲಾಯಿತು.<br>4. ಕೆ.ಕೆ.ಆರ್.ಡಿ.ಬಿ.ವತಿಯಿಂದ ಯಾವುದೇ ಅಧ್ಯಯನಕ್ಕೆ ಬೇಕಾಗುವ ವಿವರಗಳನ್ನು ಅಧ್ಯಯನ ಕೈಗೊಳ್ಳುವ ಸಂಸ್ಥೆಗೆ ಸರಿಯಾಗಿ ನೀಡುತ್ತಿಲ್ಲ. ಅಲ್ಲದೇ, ಪ್ರಾಧಿಕಾರದಲ್ಲಿ ನಡೆಯುವ ಸಭೆಗಳಿಗೂ ಸಹ ಹಾಜರಾಗುತ್ತಿಲ್ಲವೆಂದು ಮುಖ್ಯ ಮೌಲ್ಯಮಾಪನಾಧಿಕಾರ ಮತ್ತು ಈ ಸಮಿತಿಯ ಸದಸ್ಯ ಕಾರ್ಯದರ್ಶಿಯವರು ಅಧ್ಯಕ್ಷರ ಮತ್ತು ಸಮಿತಿಯ ಗಮನಕ್ಕೆ ತಂದರು. ಪ್ರಸ್ತುತ ಅಧ್ಯಯನದಲ್ಲಿ ಸಮಾಲೋಚಕ ಸಂಸ್ಥೆಯವರು ಪ್ರಾಧಿಕಾರದ ಕೋರಿಕೆಯಂತೆ ಕಾಮಗಾರಿಗಳ ಲುಕ್ಸಾನಿನ ಅಂದಾಜನ್ನು ಲೆಕ್ಕ ಹಾಕಿ ಸಲ್ಲಿಸಿದ್ದು, ಅದನ್ನು ಒಪ್ಪಬಹುದು ಎಂದು ಮುಖ್ಯ ಮೌಲ್ಯಮಾಪನಾಧಿಕಾರಿಯವರು ಅಧ್ಯಕ್ಷರಿಗೆ ತಿಳಿಸಿದರು.<br>ಮೇಲೆ ಸೂಚಿಸಿರುವ ಸಲಹೆಗಳು, ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ನಿರ್ದೇಶಕರು, ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ, ಯೋಜನಾ ಇಲಾಖೆ ಮತ್ತು ಪ್ರಾಧಿಕಾರದಿಂದ ನೀಡುವ ಸಲಹೆ/ಸೂಚನೆಗಳನ್ನು ಅಳವಡಿಸಿ ಪರಿಷ್ಕೃತ ವರದಿಯನ್ನು ಸಲ್ಲಿಸುವ ಷರತ್ತಿಗೆ ಒಳಪಟ್ಟು ವರದಿಯನ್ನು ಅನುಮೋದಿಸಲಾಯಿತು. |
| 2 | Evaluation of Impact of IAS/KAS training programme implemented by Kalyana Karnataka Human Resource, Agriculture and Cultural Society | ಸಮಾಲೋಚಕ ಸಂಸ್ಥೆಯಿಂದ ಪರಿಷ್ಕೃತ ಕರಡು ಮೌಲ್ಯಮಾಪನ ವರದಿಯನ್ನು ಪ್ರಸ್ತುತ ಪಡಿಸಲಾಗಿ, ಈ ಕೆಳಕಂಡ ಸಲಹೆಗಳನ್ನು ನೀಡಲಾಯಿತು.<br>1. ವಿವಿಧ ತರಬೇತಿ ಸಂಸ್ಥೆಗಳಿಂದ ನೀಡಿರುವ ತರಬೇತಿಯನ್ನು, ಅದೇ ರೀತಿಯ ತರಬೇತಿಯನ್ನು ಬೇರೆ ಸಂಸ್ಥೆಗಳಿಂದ ನೀಡಿರುವುದನ್ನು |

| | | |
|---|---|---|
| | **ಯೋಜನೆಯ ಅನುಷ್ಠಾನ ಇಲಾಖೆ:** ಕಲ್ಯಾಣ ಕರ್ನಾಟಕ ಮಾನವ ಅಭಿವೃದ್ಧಿ, ಕೃಷಿ ಮತ್ತು ಸಾಂಸ್ಕೃತಿಕ ಸಂಘ, ಕಲಬುರಗಿ<br><br>**ಸಮಾಲೋಚಕ ಸಂಸ್ಥೆ:** ನೈರುತ್ಯ ಆರ್ಟ್ ಮೀಡಿಯಾ | ಹೋಲಿಕೆ ಮಾಡಿ ಶೋಧನೆಗಳನ್ನು ವರದಿಯಲ್ಲಿ ಅಳವಡಿಸುವಂತೆ ಸಮಿತಿಯ ಅಧ್ಯಕ್ಷರು ಸೂಚಿಸಿದರು.<br>2. ಸದರಿ ತರಬೇತಿ ಕಾರ್ಯಕ್ರಮದ ಯಶಸ್ಸಿನ ಪ್ರಮಾಣ ಕಡಿಮೆಯಾಗಿರಲು ನಿರ್ದಿಷ್ಟ ಕಾರಣಗಳನ್ನು ನೀಡುವುದು.<br>3. ಸದರಿ ತರಬೇತಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಕೈಗೊಳ್ಳಬೇಕಾದ ಅಗತ್ಯ ಮತ್ತು ನಿರ್ದಿಷ್ಟ ಅಂಶಗಳನ್ನು ಶಿಫಾರಸ್ಸಿನಲ್ಲಿ ಸೇರಿಸುವುದು.<br>4. ಸಂಸ್ಥೆಯಿಂದ ಸಲ್ಲಿಸಿರುವ ಕರಡು ವರದಿಯ ಗುಣಮಟ್ಟವು, ಪ್ರಾಧಿಕಾರದ ವರದಿಯ ಮಾನದಂಡದ ಪ್ರಕಾರ (as per standard) ಇಲ್ಲದೇ ಇರುವುದರಿಂದ, ವರದಿಯಲ್ಲಿ ಅಗತ್ಯ ಮಾರ್ಪಾಡುಗಳನ್ನು ಮಾಡುವಂತೆ, ಮುಖ್ಯ ಮೌಲ್ಯಮಾಪನಾಧಿಕಾರಿಗಳು ಅಧ್ಯಯನದ ಪ್ರಧಾನ ಸಂಶೋಧಕರು ಮತ್ತು ಸಂಸ್ಥೆಯ ಪ್ರತಿನಿಧಿಗಳಿಗೆ ತಿಳಿಸಿದರು.<br>5. ಅಭ್ಯರ್ಥಿಗಳ ಹಾಜರಾತಿ ಮತ್ತು ಇವರಿಗೆ ನೀಡಿದ ಸ್ಟೈಪೆಂಡ್ ಬಗ್ಗೆ ಸರಿಯಾಗಿ ವಿಶ್ಲೇಷಣೆ ಮಾಡಿರುವುದಿಲ್ಲವೆಂದು ಮತ್ತು ಈ ಮೂಲ ನ್ಯೂನ್ಯತೆಯನ್ನು ಗುರುತಿಸದೇ ವರದಿ ನೀಡಿರುವುದು ವಿಷಾದನೀಯ ಮತ್ತು ಆಕ್ಷೇಪಣೀಯ ಎಂದು ಪ್ರಾಧಿಕಾರದ ಮುಖ್ಯ ಮೌಲ್ಯಮಾಪನಾಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು. ಈ ನ್ಯೂನ್ಯತೆಗಳ ಬಗ್ಗೆ ಸರಿಯಾಗಿ ಪರಿಶೀಲಿಸಿ, ವರದಿಯಲ್ಲಿ ಅಳವಡಿಸಲು ಅಧ್ಯಕ್ಷರು ಸಮಾಲೋಚಕ ಸಂಸ್ಥೆಗೆ ಸೂಚಿಸಿದರು.<br><br>ಮೇಲೆ ಸೂಚಿಸಿರುವ ಸಲಹೆಗಳು, ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಮಾನವ ಅಭಿವೃದ್ಧಿ, ಕೃಷಿ ಮತ್ತು ಸಾಂಸ್ಕೃತಿಕ ಸಂಘ, ನಿರ್ದೇಶಕರು, ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ, ಯೋಜನಾ ಇಲಾಖೆ, ಸ್ವತಂತ್ರ ಮೌಲ್ಯಮಾಪಕರು ಮತ್ತು ಪ್ರಾಧಿಕಾರದಿಂದ ನೀಡುವ ಸಲಹೆ/ಸೂಚನೆಗಳನ್ನು ಅಳವಡಿಸಿ ಪರಿಷ್ಕೃತ ವರದಿಯನ್ನು ಸಲ್ಲಿಸುವ ಷರತ್ತಿಗೆ ಒಳಪಟ್ಟು ವರದಿಯನ್ನು ಅನುಮೋದಿಸಲಾಯಿತು. |

| ಕರಡು ಉಲ್ಲೇಖದ ನಿಯಮಗಳು **(Terms of Reference)** | | |
|---|---|---|
| 1 | Evaluation of Impact of Literacy Programme for Illiterates in Karnataka during 2018-19 to 2021-22<br>**ಯೋಜನೆಯ ಅನುಷ್ಠಾನ ಇಲಾಖೆ:**<br>ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ | ತಾಂತ್ರಿಕ ಸಮಿತಿಯಿಂದ ನೀಡಿರುವ ಈ ಕೆಳಗಿನ ಸಲಹೆ/ಸೂಚನೆಗಳನ್ನು ಅಳವಡಿಸುವ ಸೂಚನೆಯೊಂದಿಗೆ ಉಲ್ಲೇಖದ ನಿಯಮಗಳನ್ನು ಅನುಮೋದಿಸಲಾಯಿತು.<br>1. ಅನುಷ್ಠಾನ ಇಲಾಖೆಯಾದ DSERT ಸಂಸ್ಥೆಯವರು ಅಧ್ಯಯನ ಕೈಗೊಳ್ಳುವ ಸಾಕ್ಷರತಾ ಕಾರ್ಯಕ್ರಮದ ವಿಷಯದ ಕುರಿತು ಸಿದ್ಧಪಡಿಸಿರುವ ಉಲ್ಲೇಖದ ನಿಯಮ (ToR) ಗಳನ್ನು ಪರಿಶೀಲಿಸಿರುವ ಬಗ್ಗೆ ಅಪರ ಮುಖ್ಯ ಕಾರ್ಯದರ್ಶಿಯವರು ಹಾಗೂ ತಾಂತ್ರಿಕ ಸಮಿತಿಯ ಅಧ್ಯಕ್ಷರು ಕೇಳಿದಾಗ DSERT ಸಂಸ್ಥೆಯ ನಿರ್ದೇಶಕರಾದ ಶ್ರೀಮತಿ. ಸುಮಂಗಳ ರವರು ಸಹಮತಿ ವ್ಯಕ್ತಪಡಿಸಿದರು ಹಾಗೂ ಸದರಿ ವಿಷಯದ ದತ್ತಾಂಶಗಳನ್ನು ಖಾತರಿ ಪಡಿಸಿಕೊಳ್ಳುವುದಾಗಿ ತಿಳಿಸಿದರು.<br>2. ಸಾಕ್ಷರತಾ ಕಾರ್ಯಕ್ರಮದ ಫಲಾನುಭವಿಗಳು SDG 4 ಗುಣಾತ್ಮಕ ಶಿಕ್ಷಣದ ಸೂಚ್ಯಾಂಕದ ಗುರಿ ಸಾರ್ಥಕತೆ ಹೊಂದಿರುವ ಬಗ್ಗೆ ಪರಿಶೀಲಿಸುವ ಕುರಿತು ಸದರಿ ಅಂಶಗಳನ್ನು ಮೌಲ್ಯಮಾಪನದ ಉದ್ದೇಶಗಳಲ್ಲಿ ಸೇರಿಸುವುದು.<br>3. ಅನುಷ್ಠಾನ ಇಲಾಖೆಯ ನಿರ್ದೇಶಕರು DSERT ಸಂಸ್ಥೆ ಇವರು ನೀಡುವ ಸಲಹೆಗಳನ್ನು ಉಲ್ಲೇಖದ ನಿಯಮಗಳಲ್ಲಿ ಸೇರ್ಪಡಿಸಿ ಪರಿಷ್ಕರಿಸಲು ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ ಇವರಿಗೆ ತಿಳಿಸಿದರು.<br>4. ಅನುಷ್ಠಾನ ಇಲಾಖೆಯಾದ DSERT ಸಂಸ್ಥೆಯವರು ಸದರಿ ಅಧ್ಯಯನಕ್ಕೆ ಸಂಬಂಧಿಸಿದಂತೆ ಪೂರ್ಣ ಫಲಾನುಭವಿಗಳ ವಿವರಗಳು, ಭೌತಿಕ/ಆರ್ಥಿಕ ವಿವರ ಹಾಗೂ ಜಿಲ್ಲಾ, ತಾಲ್ಲೂಕು ಮತ್ತು ಕೆಳಗಿನ ಹಂತದಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿ ಸಿಬ್ಬಂದಿಗಳ ವಿವರಗಳನ್ನು ಪ್ರಾಧಿಕಾರ/ಮೌಲ್ಯಮಾಪನ ಸಂಸ್ಥೆಗೆ ನೀಡಿ ಸಹಕರಿಸಲು ಸೂಚಿಸಿದರು. |
| 2 | Need Assessment of the Works Proposed by the Neeravari Nigams - Karnataka Neeravari Nigam Limited (KNNL) and Vishveshwariah Jala | ತಾಂತ್ರಿಕ ಸಮಿತಿಯಿಂದ ನೀಡಿರುವ ಈ ಕೆಳಗಿನ ಸಲಹೆ/ಸೂಚನೆಗಳನ್ನು ಅಳವಡಿಸುವ ಸೂಚನೆಯೊಂದಿಗೆ ಉಲ್ಲೇಖದ ನಿಯಮಗಳನ್ನು ಅನುಮೋದಿಸಲಾಯಿತು.<br>1. ಯೋಜನೆಯ ಫಲಾನುಭವಿಗಳ ತೃಪ್ತಿಯನ್ನು ಪರಿಶೀಲಿಸುವ ಕುರಿತು ಅಂಶವನ್ನು ಮೌಲ್ಯಮಾಪನದ ಉದ್ದೇಶಗಳಲ್ಲಿ ಸೇರಿಸುವಂತೆ ಸಮಿತಿಯ ಅಧ್ಯಕ್ಷರು ಸೂಚಿಸಿದರು. |

| | | |
|---|---|---|
| | Nigam Limited (VJNL) | 2. ಅನುಷ್ಠಾನ ಇಲಾಖೆಯಿಂದ (ನೀರಾವರಿ ನಿಗಮಗಳು) ನೀಡುವ ಸಲಹೆ/ಸೂಚನೆಗಳಂತೆ ಉಲ್ಲೇಖದ ನಿಯಮಗಳನ್ನು ಪರಿಷ್ಕರಿಸುವುದು.<br>3. ಮೌಲ್ಯಮಾಪನಕ್ಕಾಗಿ ಆಯ್ಕೆ ಮಾಡಲಾಗಿರುವ ಕಾಮಗಾರಿ ಗಳೊಂದಿಗೆ ಆಯಾ ನಿಗಮಗಳಿಂದ ಅನುಷ್ಠಾನಗೊಳಿಸುತ್ತಿರುವ ನೀರಾವರಿ ಯೋಜನೆಗಳನ್ನು ಒಟ್ಟಾರೆಯಾಗಿ ಮೌಲ್ಯಮಾಪನಕ್ಕಾಗಿ ಪರಿಗಣಿಸುವುದು.<br>4. ಆಯ್ಕೆ ಮಾಡಲಾಗಿರುವ ಕಾಮಗಾರಿಗಳಲ್ಲಿ ಪ್ರಸ್ತುತ ಪ್ರಗತಿಯಲ್ಲಿರುವ ಕಾಮಗಾರಿಗಳೊಂದಿಗೆ ಪೂರ್ಣಗೊಂಡಿರುವ ಕಾಮಗಾರಿಗಳನ್ನೂ ಮೌಲ್ಯಮಾಪನಕ್ಕಾಗಿ ಪರಿಗಣಿಸುವುದು. |
| 3 | 2022-23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 26900 ವಿದ್ಯಾರ್ಥಿಗಳ ಗೈರುಹಾಜರಾತಿಯ ಬಗ್ಗೆ ಕಿರು ಅಧ್ಯಯನ<br><br>**ಯೋಜನೆ ಅನುಷ್ಠಾನ ಇಲಾಖೆ:**<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ | ತಾಂತ್ರಿಕ ಸಮಿತಿಯಿಂದ ನೀಡಿರುವ ಈ ಕೆಳಗಿನ ಸಲಹೆ/ಸೂಚನೆಗಳನ್ನು ಅಳವಡಿಸುವ ಸೂಚನೆಯೊಂದಿಗೆ ಉಲ್ಲೇಖದ ನಿಯಮಗಳನ್ನು ಅನುಮೋದಿಸಲಾಯಿತು.<br>1. ಅನುಷ್ಠಾನ ಇಲಾಖೆಯಾದ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಇವರು ಅಧ್ಯಯನ ಕೈಗೊಳ್ಳುವ ಕಾರ್ಯಕ್ರಮದ ವಿಷಯದ ಕುರಿತು ಸಿದ್ಧಪಡಿಸಿರುವ ಉಲ್ಲೇಖದ ನಿಯಮ (ToR) ಗಳನ್ನು ಪರಿಶೀಲಿಸಿ, ದತ್ತಾಂಶಗಳನ್ನು ಖಾತರಿ ಪಡಿಸಿಕೊಳ್ಳುವುದು.<br>2. ಸದರಿ ಅಧ್ಯಯನವನ್ನು ಕಿರು ಅವಧಿಯಲ್ಲಿ (3 ತಿಂಗಳಿಗೆ ಸೀಮಿತ) ಪೂರ್ಣಗೊಳಿಸುವುದು.<br>3. ಕರ್ನಾಟಕದ ಪ್ರತಿಷ್ಠಿತ ವಿಶ್ವವಿದ್ಯಾಲಯದ ಮೂಲಕ ಕಿರು ಅವಧಿಯ ಅಧ್ಯಯನವನ್ನು ಕೈಗೊಳ್ಳಲು ಕ್ರಮವಹಿಸುವುದು.<br>4. ಸದರಿ ಅಧ್ಯಯನವನ್ನು ಕಡಿಮೆ ವೆಚ್ಚದ ಆಯ್ಕೆ (Least Cost Selection) ವಿಧಾನದ ಮೂಲಕ ಮೌಲ್ಯಮಾಪನ ಸಂಸ್ಥೆಯನ್ನು ಗುರುತಿಸುವುದು.<br>5. ನಿಗಧಿತ ಕಾಲಾವಧಿಯಲ್ಲಿ ಅಧ್ಯಯನವನ್ನು ಪೂರ್ಣಗೊಳಿಸಿ ಶೈಕ್ಷಣಿಕ ಸುಧಾರಣೆಗೊಳಿಸುವ ಸಲಹೆ/ಶಿಫಾರಸ್ಸುಗಳನ್ನು ಶಿಕ್ಷಣ ಇಲಾಖೆಗೆ ಕಳುಹಿಸುವುದು. |

Sd/- 31/8/2023

(ಶ್ರೀಮತಿ ಸುಷಮಾ ಗೋಡಬೋಲೆ, ಭಾ.ಆ.ಸೇ.,)
ಸದಸ್ಯ ಕಾರ್ಯದರ್ಶಿಗಳು, ತಾಂತ್ರಿಕ ಸಮಿತಿ,
ಮತ್ತು ಮುಖ್ಯ ಮೌಲ್ಯಮಾಪನಾಧಿಕಾರಿಗಳು
ಕರ್ನಾಟಕ ಮೇಲ್ವಿಚಾರಣೆ & ಮೌಲ್ಯಮಾಪನ ಪ್ರಾಧಿಕಾರ

Sd/-

(ಡಾ.ಶಾಲಿನಿ ರಜನೀಶ್, ಭಾ.ಆ.ಸೇ.,)
ತಾಂತ್ರಿಕ ಸಮಿತಿಯ ಅಧ್ಯಕ್ಷರು ಹಾಗೂ ಸರ್ಕಾರದ ಅಪರ
ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

**ದಿನಾಂಕ: 31–08–2023ರಂದು ನಡೆದ ಪ್ರಾಧಿಕಾರದ 61ನೇ ತಾಂತ್ರಿಕ ಸಮಿತಿ ಸಭೆಗೆ ಹಾಜರಾಗಿರುವ ಸದಸ್ಯರುಗಳು:–**

1. ಡಾ. ಶಾಲಿನಿ ರಜನೀಶ್, ಭಾ.ಆ.ಸೇ., ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗು ತಾಂತ್ರಿಕ ಸಮಿತಿಯ ಅಧ್ಯಕ್ಷರು,
2. ಶ್ರೀಮತಿ ಸುಷಮಾ ಗೋಡಬೋಲೆ, ಭಾ.ಆ.ಸೇ., ಮುಖ್ಯ ಮೌಲ್ಯಮಾಪನಾಧಿಕಾರಿಗಳು ಮತ್ತು ತಾಂತ್ರಿಕ ಸಮಿತಿಯ ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ.
3. ಶ್ರೀ ಅನಿರುದ್ಧ್ ಶ್ರವಣ್, ಭಾ.ಆ.ಸೇ., ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಕಲಬುರಗಿ (ಆನ್‌ಲೈನ್ ಮೂಲಕ).
4. ಶ್ರೀ. ಶಶಿಧರ.ಟಿ ಆಡಳಿತಾಧಿಕಾರಿಗಳು, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ,
5. ಶ್ರೀ.ಎಸ್.ಆರ್.ಎಸ್. ನಾಥನ್, ನಿರ್ದೇಶಕರು, ಸಾಂಖ್ಯಿಕ ಮತ್ತು ಮಾಹಿತಿ ತಂತ್ರಜ್ಞಾನ, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ.
6. ಡಾ॥ ಮಂಜುನಾಥ್.ಎ.ವಿ, ನಿರ್ದೇಶಕರು (ಮೌಲ್ಯಮಾಪನ), ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ.
7. ಶ್ರೀಮತಿ ಸವಿತಾ ದಯಾನಂದ, ಸಹ ನಿರ್ದೇಶಕರು, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ.
8. ಶ್ರೀಮತಿ ಅಮೃತವಲ್ಲಿ.ಡಿ.ಎಸ್. ಸಹ ನಿರ್ದೇಶಕರು, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ.
9. ಶ್ರೀಮತಿ ಪಾವನಿ ಕುಲಕರ್ಣಿ.ಎಸ್. ಸಹ ನಿರ್ದೇಶಕರು, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ.
10. ಶ್ರೀ ಕೆ.ಉಮಾಕಾಂತ ಭಟ್. ಸಹ ನಿರ್ದೇಶಕರು, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ.
11. ಡಾ.ಚಂದ್ರಶೇಖರಯ್ಯ ನಿರ್ದೇಶಕರು, ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ, ಯೋಜನಾ ಇಲಾಖೆ.
12. ಶ್ರೀ ಉಮೇಶ್.ಎಸ್., ಜಂಟಿ ನಿರ್ದೇಶಕರು ಹಾಗೂ ಪರೀಕ್ಷಾ ಮಂಡಳಿ ಕಾರ್ಯದರ್ಶಿಗಳು.
13. ಶ್ರೀಮತಿ ವಿ ಸುಮಂಗಲ, ನಿರ್ದೇಶಕರು, ಸಮೂಹ ಶಿಕ್ಷಣ, ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು.
14. ಶ್ರೀ ಎನ್.ಗಂಗಾಧರ, ಸಹಾಯಕ ನಿರ್ದೇಶಕರು, ಸಮೂಹ ಶಿಕ್ಷಣ, ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು.
15. ಶ್ರೀ ಎಚ್.ಕೆ.ವೆಂಕಟೇಶ್, ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
16. ಶ್ರೀಮತಿ ಅಮೃತ, ತಾಂತ್ರಿಕ ಸಹಾಯಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು.
17. ಶ್ರೀಮತಿ ಶಿಲ್ಪಾ.ಸಿ.ಹೊಲಾಲ್, ತಾಂತ್ರಿಕ ಸಹಾಯಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
18. ಶ್ರೀಮತಿ ಶೈಲಜಾ.ಕೆ, ತಾಂತ್ರಿಕ ಸಹಾಯಕರು, ಜಲಸಂಪನ್ಮೂಲ ಇಲಾಖೆ, ಬೆಂಗಳೂರು.
19. ಶ್ರೀಮತಿ ರಕ್ಷಾ.ಎಂ.ಎನ್, ಸಹಾಯಕ ಇಂಜಿನಿಯರ್, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು.
20. ಶ್ರೀ ಹರೀಶ್.ಎಸ್.ಎಂ. ಇಂಜಿನಿಯರ್, ಸುಸ್ಥಿರ ಅಭಿವೃದ್ಧಿ ಕೇಂದ್ರ, ಬೆಂಗಳೂರು.
21. ಶ್ರೀ ಅರುಣ್, ನೈರುತ್ಯ ಕಲಾ ಮಾಧ್ಯಮ, ಬೆಂಗಳೂರು.
22. ಶ್ರೀಮತಿ ಸಾಧ್ವಿ, ನೈರುತ್ಯ ಕಲಾ ಮಾಧ್ಯಮ, ಬೆಂಗಳೂರು.
23. ನರೇಂದ್ರಪ್ಪ ಟಿ. ವಿಷಯ ತಜ್ಞರು, (ಆನ್‌ಲೈನ್ ಮೂಲಕ).
24. ಶ್ರೀ ವೆಂಕಟೇಶ್.ಆರ್, ಉಪ ನಿರ್ದೇಶಕರು, ಮಾನವ ಅಭಿವೃದ್ಧಿ ಇಲಾಖೆ, ಬೆಂಗಳೂರು